ಜೂ. 1982–83ನೇ ಸಾಲಿನ ಮಂಡ್ಯ ತಾಲ್ಲೂಕಿನ 68 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಆರ್‌ಡಿ 31 ಟಿಆರ್‌ಎಮ್ 83ನೇ ಕ್ರಮಾಂಕದ 17ನೇ ಆಗಸ್ಟ್ 1983ನೇ ದಿನಾಂಕದ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ವಿದ್ಯುಚ್ಛಕ್ತಿ ಹಾಗೂ ಅಬ್ಕಾರಿ ಮಂತ್ರಿಗಳ ಪರವಾಗಿ) :—ಅಧ್ಯಕ್ಷರೇ, 1965ನೇ ಇಸವಿಯ 71 (4)ನೇ ಕಲಮಿನ ಮೇರೆಗೆ,

ಅ. 1982ನೇ ಇಸವಿಯ ಕರ್ನಾಟಕ ಅಬ್ಕಾರಿ (ಮರಗಳಿಂದ ಬಟ್ಟಿ ಇಳಿಸುವುದು) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ಸಂಖ್ಯೆ ಏಚ್.ಡಿ. 126 ಇಡಿಸಿ 81, ದಿನಾಂಗ 8–11–1982.

ಆ. 1983ನೇ ಇಸವಿಯ ಕರ್ನಾಟಕ ಅಬ್ಕಾರಿ (ಸ್ವದೇಶಿ ಹಾಗೂ ವಿದೇಶಿ ಮದ್ಯದ ಮಾರಾಟದ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ಸಂಖ್ಯೆ ಎಚ್‌ಡಿ 8, ಪಿಇಎಸ್ 83 ದಿನಾಂಕ 20–6–83.

ಇ. 1983ನೇ ಇಸವಿಯ ಕರ್ನಾಟಕ ಅಬ್ಕಾರಿ (ಸರಾಯಿ ಮಾಡುವ ಮನೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ಸಂಖ್ಯೆ ಎಚ್‌ಡಿ 9 ಪಿಇಎಸ್ 83. ದಿನಾಂಕ 20–6–83.

ಈ. 1983ನೇ ಇಸವಿಯ ಕರ್ನಾಟಕ ಅಬ್ಕಾರಿ (ಮಧುಸಾರವನ್ನು ಭಟ್ಟಿ ಇಳಿಸುವ ಕಾರ್ಖಾನೆ ಹಾಗೂ ಉಗ್ರಾಣ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಚ್‌ಡಿ 17 ಟಇಎಸ್ 82, ದಿನಾಂಕ 23–6–83.

ಉ. 1983ನೇ ಇಸವಿಯ ಕರ್ನಾಟಕ ಅಬ್ಕಾರಿ (ಅಬ್ಕಾರಿ ಶುಲ್ಕಗಳು) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ಸಂಖ್ಯೆ ಎಚ್‌ಡಿ 59 ಇಡಿಸಿ 83, ದಿನಾಂಕ 24–6–83.

ಊ. 1983ನೇ ಇಸವಿಯ ಕರ್ನಾಟಕ ಅಬ್ಕಾರಿ ಸ್ವದೇಶಿ ಹಾಗೂ ವಿದೇಶಿ ಮದ್ಯಗಳ ಮಾರಾಟ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಸಂಖ್ಯೆ ಎಚ್‌ಡಿ 56 ಇಡಿಸಿ 78,ನೇ ಕ್ರಮಾಂಕದ 24–6–83ನೇ ದಿನಾಂಕದ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಅರಣ್ಯ ರಾಜ್ಯ ಮಂತ್ರಿ ಪರವಾಗಿ):—

1956ನೇ ಇಸವಿಯ ಕಂಪನಿಗಳ ಶಾಸನದ 619 ಅ (3)ನೇ ಕಲಮಿನ ಮೇರೆಗೆ ಹೊರಡಿಸಿದ, 1980–81ನೇ ಸಾಲಿನ ಕರ್ನಾಟಕ ರಾಜ್ಯದ ಗೋಡಂಬಿ ಅಭಿವೃದ್ಧಿ ಸಂಸ್ಥೆ ನಿಯಮಿತದ 3ನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿ) :—

1939ನೇ ಇಸವಿಯ ಮೋಟಾರು ವಾಹನಗಳ ಶಾಸನದ 133 (3)ನೇ ಕಲಮಿನ ಮೇರೆಗೆ ಹೊರಡಿಸಲಾದ,

ಅ, 1983ನೇ ಇಸವಿಯ ಕರ್ನಾಟಕ ರಾಜ್ಯದ ಮೋಟಾರು ವಾಹನಗಳ (ನಾಲ್ಕನೆಯ ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದ ಎಜ್.ಡಿ. 1 ಟಿ.ಎಂಆರ್ 83ನೇ ಕ್ರಮಾಂಕದ 3–3–83ನೇ ದಿನಾಂಕದ ಅಧಿಸೂಚನೆಯನ್ನು ;

ಆ. 1983ನೇ ಇಸವಿಯ ಕರ್ನಾಟಕ ರಾಜ್ಯದ ಮೋಟಾರು ವಾಹನಗಳ (5ನೇ ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಎಚ್‌ವಿ 28 ಟಿಎಂಆರ್ 79ನೇ ಕ್ರಮಾಂಕದ 26–4–83ನೇ ದಿನಾಂಕದ ಅಧಿಸೂಚನೆಯನ್ನು ಹಾಗೂ

ಇ. 1983ನೇ ಇಸವಿಯ ಕರ್ನಾಟಕ ರಾಜ್ಯದ ಮೋಟಾರು ವಾಹನಗಳ (7ನೇ ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಎಚ್‌ಡಿ 6 ಟಿಎಂಆರ್ 83ನೇ ಕ್ರಮಾಂಕದ 21–5–83ನೇ ದಿನಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

## ಮನವಿಯನ್ನೊಪ್ಪಿಸುವುದು

ಶ್ರೀ ಎಲ್.ಟಿ. ತಿಮ್ಮಪ್ಪಹೆಗ್ಗಡೆ :—ಸಾಗರ ತಾಲ್ಲೂಕಿನ ಕೃಷಿ ಕಾರ್ಮಿಕರು ಹಾಗೂ ರೈತರು ಸಹಿ ಮಾಡಿದ ಮನವಿಯೊಂದನ್ನು ಸಭೆಗೆ ಒಪ್ಪಿಸುತ್ತೇನೆ.